

**ಈ ಸಮನ್ವಯ ಸಾಧಿಸಲು ಸಾಧ್ಯವಾದದ್ದು ಹೇಗೆ?**

ನನಗೆ ಇವೆರಡೂ ಬೇರೆ ಬೇರೆ ಎಂದು ಯಾವತ್ತೂ ಅನಿಸಿಯೇ ಇಲ್ಲ. ಭಗವದ್ಗೀತೆಯಲ್ಲಿ 'ಯೋಗ ಕರ್ಮಸು ಕೌಶಲಂ' ಎಂಬ ಮಾತಿದೆ. 'ನಿನ್ನ ಕೆಲಸದ ಜೊತೆ ನೀನಿರು' ಎಂದು ನಾನು ಇದನ್ನು ಅರ್ಥೈಸಿದ್ದೇನೆ. ಇದು ನನ್ನದು, ನಾನು ಮಾಡಬೇಕಾದದ್ದು ಎಂಬಂತೆ ನಾವು ಸರಕಾರಿ 'ಚಾಕರಿ'ಯಲ್ಲೂ, ವ್ಯವಹಾರದಲ್ಲೂ ಇರುವುದು ಕಡಿಮೆ. ಅಂದರೆ ಕೆಲಸದಲ್ಲಿ ಪ್ರೀತಿ, ತನ್ಮಯತೆಗಳಿಲ್ಲವೆಂದಲ್ಲ! ಅವು ಎಲ್ಲರಲ್ಲೂ ಇರುತ್ತವೆ. ಸೃಜನಶೀಲ ಅಥವಾ ಸೃಜನೇತರ ಎರಡೂ ಕೆಲಸ ನನಗೆ ಒಂದೇ! ಕಥೆ, ಕಾವ್ಯ, ಕಾದಂಬರಿ ಬರೆಯುವಾಗ ಅನುಭವಿಸುವ 'ಸುಖ'ವನ್ನು ನಾನು ಸಂಘಟನೆಯಲ್ಲೂ ಅನುಭವಿಸಿದ್ದೇನೆ. ನನ್ನ ಮೊದಲ ಕಾದಂಬರಿ 'ಮಣ್ಣಿನ ಮಕ್ಕಳು' (1965) ಪ್ರಕಟವಾದಾಗ ನನಗೆ ಹದಿನೆಂಟು ವರ್ಷ. ಮೊದಲ ಸಂಘಟನೆ 'ಯುವಕ ಮಂಡಲ' (1966)ದಿಂದ ಪ್ರಾರಂಭಿಸಿ ಈ ತನಕವೂ ಸಂಘಟನೆಯನ್ನು ನನ್ನ ಬದುಕಿನ ಒಂದು ಭಾಗವಾಗಿಸಿಕೊಂಡಿದ್ದೇನೆ.

ಸಮಯ, ನನ್ನ ಕೈಯಲ್ಲಿ ಬೇಕಾದಾಗ 'ಇದೆ' ಎಂದುಕೊಂಡವನು ನಾನು! ಬರೆಯುವುದರ ನಡುವೆ ರೋಗಿಯೊಬ್ಬ ಬಂದರೆ, ತಕ್ಷಣ ಎದ್ದು ಹೋಗಿ ಅವನಿಗೆ ಚಿಕಿತ್ಸೆ ನೀಡಿ ಬಂದು ಮತ್ತೆ ಬರೆಯಲು ಕೂರುತ್ತೇನೆ. 'ಮೂಡ್', 'ಏಕಾಂತತೆ' ಬೇಕು ಎಂಬುದೆಲ್ಲ ನನ್ನಲ್ಲಿಲ್ಲ. ನಾನು ಬರೆಯಲು ಹೊರಟರೆ, ಒಂದೆರಡು ತಿಂಗಳು ಅದರ ಗುಂಗಿನಲ್ಲೇ ಇರುತ್ತೇನೆ. ಸಂಘಟನೆಗೆ ಹೊರಟರೆ ಐದಾರು ತಿಂಗಳು ಬರೆಯುವುದನ್ನು ಮರೆಯುವುದೂ ಸಾಧ್ಯವಿದೆ. ನನಗೆ ಎರಡೂ ಸಹಜ, ಎರಡೂ ಅನಿವಾರ್ಯ!

◆ **ಸಂಘಟನೆಯ ಲೋಕ ವ್ಯವಹಾರ ಮತ್ತು ಸೃಜನಶೀಲತೆಯ ಮುಗ್ಧ ಪ್ರಾಮಾಣಿಕತೆಯ ಭಿನ್ನ ಮುಖದ ವ್ಯಕ್ತಿತ್ವಗಳನ್ನು ಸಾಮಯಿಕ ಅಗತ್ಯಕ್ಕನುಗುಣವಾಗಿ ಪ್ರಕಟಿಸುತ್ತ ಬಂದಿರುವಿರಿ. ವೃತ್ತಿಯಿಂದ ವೈದ್ಯರಾದ ನೀವು ಮನೋವೈದ್ಯಕೀಯ ನೆಲೆಯಿಂದ ಇದನ್ನು ಹೇಗೆ ನಿರ್ವಚಿಸುತ್ತೀರಿ?**

ನಮ್ಮ ಕೆಲಸ ಕಾರ್ಯಗಳನ್ನು ಭಿನ್ನ ಭಿನ್ನ